ನಾಡಕಚೇರಿ ತೆರೆಯುವುದು ಬಗ್ಗೆ

೯೬೪. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬–೮೭ ಮತ್ತು ೧೯೮೭–೮೮ನೇ ಸಾಲುಗಳಲ್ಲಿ ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ ಎಷ್ಟು ಹೋಬಳಿಗಳಲ್ಲಿ ನಾಡಕಛೇರಿಗಳನ್ನು ಪ್ರಾರಂಭಿಸಲಾಗಿದೆ ?

ಆ) ಉಳಿದ ಹೋಬಳಿಗಳಲ್ಲೂ ಸಹ ನಾಡ ಕಛೇರಿಗಳನ್ನು ತೆರೆಯುವ ಯೋಜನೆ ಇದೆಯೇ ? ಹಾಗಿದ್ದಲ್ಲಿ ತರೀಕೆರೆ ತಾಲ್ಲೂಕಿನ ಶಿವನಿ ಹೋಬಳಿಯಲ್ಲಿ ತೆರೆಯಲಾಗುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ೧೯೮೬–೮೭ ೧೬೭ ಹೋಬಳಿಗಳಲ್ಲಿ ನಾಡ ಕಛೇರಿ ತೆರೆಯಲಾಗಿದೆ.
೧೯೮೭–೮೮ ಯಾವುದೂ ಇಲ್ಲ.

ಆ) ನಾಡ ಕಛೇರಿಗಳನ್ನು ಹಂತ ಹಂತವಾಗಿ ರಾಜ್ಯದ ಎಲ್ಲ ಹೋಬಳಿಗಳಲ್ಲೂ (ಕಸಬಾ ಹೊರತು ಹೊಣಕಾಸು ಪರಿಸ್ಥಿತಿಯನ್ನಾಧರಿಸಿ ಪ್ರಾರಂಭಿಸಲು ಸರ್ಕಾರವು ತೀರ್ಮಾನಿಸಿದೆ, ಈ ರೀತಿ ಪ್ರಾರಂಭಿಸುವಾಗ ತರೀಕೆರೆ ತಾಲ್ಲೂಕಿನ ಶಿವನಿ ಹೋಬಳಿಯಲ್ಲಿ ನಾಡ ಕಛೇರಿ ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು.

ಭೂ ಸುಧಾರಣಾ ಕಾನೂನಿನ ಕುರಿತು

೫೮೨. ಶ್ರೀ ಸಿ.ಎಂ. ಉದಾಸಿ (ಹಾನಗಲ್).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭೂ ಸುಧಾರಣಾ ಕಾನೂನು ಜಾರಿಗೆ ಬರುವುದಕ್ಕೆ ಮೊದಲು ರೈತರು ಅನೇಕ ದಿನಗಳಿಂದ ಸ್ವಇಚ್ಛೆಯಿಂದ ಜಮೀನು ಮಾಡುವುದನ್ನು ಬಿಟ್ಟು ಮಾಲೀಕರ ಸ್ವಂತ ಸಾಗುವಳಿ ಮಾಡುತ್ತಿದ್ದರಿಂದ ಅನಧಿಕೃತವಾಗಿ ರೈತರು ಹಕ್ಕು ಪತ್ರದ ೧೫ (೨) ಕಾಲಂದಲ್ಲಿ ಮುಂದುವರಿಯುತ್ತಿರುವ ಪ್ರಕರಣಗಳು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹೀಗೆ ಅನಧಿಕೃತವಾಗಿ ಮುಂದುವರಿಯುತ್ತಿದ್ದು ಸರಕಾರದೆಂದು ನಮೂದು ಆಗಿರುವುದರಿಂದ ಸ್ವಂತ ಸಾಗುವಳಿ ಮಾಡುವ ಮಾಲೀಕರಿಗೆ, ಮಾಲೀಕರು ತಮ್ಮ ಜಮೀನಿಗೆ ಬೆಳೆ ಸಾಲ ಪಡೆಯಲು ಬ್ಯಾಂಕಿಗೆ ಒತ್ತೆ ಹಾಕುವುದಾಗಲೀ ಬರದೆ ಇರುವುದು ಸರಕಾರದವರ ಗಮನಕ್ಕೆ ಬಂದಿವೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಹೌದು, ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಕೆಲವೇ ಪ್ರಕರಣಗಳು ಮಾತ್ರ.

ಆ) ಟ್ರಿಬ್ಯುನಲ್‌ಗಳ ಮುಂದೆ ನಿಗಧಿತ ಅವಧಿಯೊಳಗಾಗಿ ನಮೂನೆ-೭ರಲ್ಲಿ ಅರ್ಜಿಗಳನ್ನು ಸಲ್ಲಿಸದಂತೆ ಪ್ರಕರಣಗಳಿಗೆ ಸಂಬಂಧಿಸಿದ ಜಮೀನು ಸರ್ಕಾರದ ವಶದಲ್ಲಿ ಉಳಿಯುತ್ತದೆ. ಆದುದರಿಂದ ಇಂಥ ಜಮೀನುಗಳ ಆಧಾರದ ಮೇಲೆ ಕಾಯಿದೆ ಪ್ರಕಾರ ಸಾಲ ಸೌಲಭ್ಯಗಳನ್ನು ಯಾವುದೇ ಬ್ಯಾಂಕಿನಿಂದ ಪಡೆಯಲು ಅರ್ಹರಿರುವುದಿಲ್ಲ.

ಮೇವು ಬೆಳೆಯುವ ಸಲುವಾಗಿ ಕೊಟ್ಟ ಸಾಲ ಮನ್ನಾ ಕುರಿತು

೫೮೮. ಶ್ರೀ ಸಿ. ಎಂ. ಉದಾಸಿ (ಹಾವಗಲ್).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫–೮೬ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಮೇವು ಬೆಳೆಯುವ ಸಲುವಾಗಿ ರೈತರಿಗೆ ಸಾಲ ಕೊಟ್ಟು ಮೇವು ಬೆಳೆಯಲು ಸರ್ಕಾರ ಸೂಚಿಸಿದ್ದು ನಿಜವೇ ?